Regd No B G 155

ಸತ್ಯವಾದಿ

16—10—1955

49th Year
Satyavadi
DAILY
MYSORE 4

ಸ್ಥಾಪಕರು – ಅರವ ಸೆ ಸಿಂಸ್ಕೇದಾರ್ ಎಂ ವಿ ಶುಬ್ಬರಾಯುರು ಸಂಪಾದಕರು – ಧರ್ಮಪ್ರಚಾರನಿರತ ಎಂ ಎಸ್ ಕೃಷ್ಣರಾವ್ 2 ಪೈಸೆ

ಚೀಣೀ ವಿಶ್ವವಿದ್ಯಾಲಯ ಮುಚ್ಚಲ್ಪಟ್ಟಿತು

ಜಕರ್ತ — ನಗರದ ಹೊರವಲಯದಲ್ಲಿರುವ ಚೀಣೀ-ಮಾಲೀಶಕ್ತಿಯ ಮತ್ತು 500 ವಿದ್ಯಾರ್ಥಿಗಳನ್ನು ಳ್ಳ ರಿಪಬ್ಲಿಕಾ ವಿಶ್ವವಿದ್ಯಾಲಯವು ನಿನ್ನೇ ಮುಚ್ಚಲ್ಪಹಾಕಲ್ಪಟ್ಟಿತು – ಅಲ್ಲಿದ್ದವರಲ್ಲಿ 500 ಮಂದಿ ಕಮ್ಯುನಿಸ್ಟು ವಿರುದ್ಧದ 500 ಮಂದಿ ವಿದ್ಯಾರ್ಥಿಗಳೂ ಹೊಡೆದಾಟ ನಡೆದು ವಿಶ್ವವಿದ್ಯಾಲಯವು ಕುಪಿತ ಗುಂಪಿನಿಂದ ಸುಡಲ್ಪಟ್ಟಿತು – ಒಬ್ಬ ಚೀಣೀ ವಿದ್ಯಾರ್ಥಿ ಹೊಡೆದು ಸಾಯಿಸಲ್ಪಟ್ಟನೆಂದೂ 250 ಮಂದಿ ಗಾಯಗೊಂಡಿರುವರೆಂದೂ ಪೋಲೀಸು ಹೇಳಿಕೆ.

—o—

ದಿನಕ್ಕೆ ರೂ 2 ಲಕ್ಷ

ಬೆಂಗಳೂರು— ವೈಸೂರು ಜನತೆ ಲಕ್ಷಣಾ ನಿಧಿಗೆ ದಿನಕ್ಕೆ ರೂ 2 ಲಕ್ಷ ದಂತೆ ಕೊಡುತ್ತಿರುವರೆಂದು ಮುಖ್ಯ ಮಂತ್ರಿಗಳು ಹೇಳಿದರು.

ನೋಬಲು ಪಾರಿತೋಷಕ

ಸ್ಟಾಕಹಂ— ಈ ವರ್ಷದ ಸಾಹಿತ್ಯದ ನೋಬಲು ಪ್ರೈಜು 282000 ಕ್ರೌನಗಳು ರಷ್ಯಾದ ಪ್ರಸಿದ್ಧ ಗ್ರಂಥಕರ್ತ ಪೋಲಕೋವಿಗೆ ದೊರೆತಿದೆ.

ಆಹಾರ

ಬೆಂಗಳೂರು— ವ್ಯವಸಾಯ ಇಲಾಖೆಯನ್ನು ಪುನರ್ ಜೀವಗೊಳಿಸಬೇಕೆಂದೂ ಫಲದಾಯಕವಲ್ಲದ ಸರ್ಕಾರಿ ಫಾರಂಗಳನ್ನು ಮುಚ್ಚಬೇಕೆಂದೂ ನಿನ್ನೇ ಶಾಸನಸಭೆಯಲ್ಲಿ ಸದಸ್ಯರು ಹೇಳಿದರು; ಆಹಾರ ಸಂಬಂಧದ ಚರ್ಚೆ ಇವತ್ತೂ ನಡೆಯುತ್ತಿದೆ

ಸೆಂಟೋ ಶಕ್ತಿಗಳು

ನವದೆಹಲಿ— ಪಾಕಿಸ್ತಾನವು ಭಾರತದ ಮೇಲೆ ವತ್ತೆ ಯುದ್ಧ ನಡೆಸಲು ಸೆಂಟೋ ಶಕ್ತಿಗಳು ಪಾಕಿಸ್ತಾನಕ್ಕೆ ಆಯುಧ, ಎಣ್ಣೆ ಸಂಬರಾಜು ಮಾಡುತ್ತಿವೆಯೆಂದು ಕೃಷ್ಣಮೆನನ್ ಹೇಳಿದರು— ಭಾರತವು ತನಗೆ ಸೇರಿದ ಜಮ್ಮು ಕಾಶ್ಮೀರದ ಯಾವ ಭಾಗವನ್ನೂ ಪಾಕಿಸ್ತಾನಕ್ಕೆ ಕೊಡಲು ಎಂದೂ ಒಪ್ಪುವುದಿಲ್ಲವೆಂದೂ ಹೇಳಿದರು

ನಾಳೆಯ ಪಂಚಾಂಗ

ದೈವಜ್ಞ ಶಿಖಾಮಣಿ
ಆಸ್ಥಾನವಿದ್ವಾನ್ ಧರ್ಮಾಧಿಕಾರಿ
ರಾಜಕಾರಾಮಸಕ್ತ, ಜ್ಯೋತಿರ್ವಿದ್ಯಾನಿಧಿ
ಸಂಪತ್ಕೃಷ್ಣಜೋಯಿ ಸಂವರಿಂದ

37 ಭೂನ ವಾರ ಪಪ್ಲವಿ ಪುನರ್ವಸು
ತೃತೀಯವಿಷ ವಪುಣ್ಯಕಾಲ

ಜೂಜಿನಬೋರೆ ವಿದ್ಯಾರ್ಥಿಗಳಿಗೆ

ಕೊಲಂಬೊ— ಸಿಲೋನಿನಲ್ಲಿ ಕಾದುರೆ ಜೂಜು ವಜಾಮಾಡಲ್ಪಟ್ಟಿರುವುದರಿಂದ ಜೂಜಿನಬೋರೆಯು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಪಾಠದ ತರಗತಿಗಳಿಗೆ ಉಪಯೋಗಿಸಲಾಗುತ್ತಿದೆ

ಬೆದರಿಕೆ

ಧರ್ಮಶಾಲಾ— ಮಾಜಿ ಸಿಪಾಯಿ ಮತ್ತು ಈಗ ಸ್ಥಳಪಾಧ್ಯಾಯರಾಗಿರುವ ಅವಿನಾಶಚಂದ್ರರು ತಮ್ಮ ತಿಂಗಳುಗಟ್ಟಲೆ ಪೆಂಶನ್ ರೂ 13-50 ತುರ್ತು ಪರಿಸ್ಥಿತಿ ನಿಧಿಯು ವವರೆಗೆ ರಕ್ಷಣಾನಿಧಿಗೆ ಕೊಡಲು ನಿರ್ಧರಿಸಿರುವರು

ಕಾರಣವಿಲ್ಲದೇ ಇಲ್ಲ

ನವದೆಹಲಿ— ಭಾರತವು ಅಂತರಾಷ್ಟ್ರೀಯ ಅಭಿವೃದ್ಧಿ ಸಂಸ್ಥೆ ಪುರಜೂರ್ಮಾದಿ ದಿರುವ 100 ಮಿಲಿಯ ಸಾಲಾ ಪಡೆಯುವಾಗಿಲ್ಲ — ಕಾರಣ, 39 ಮಿಲಿಯ ಹೆಚ್ಚು ವಿದೇಶೀ ವಿನಿಮಯ ಹೊಂದಲು ತಿಳಿಸಲಾಗಿದ್ದು, ಅದನ್ನು ಕೊಡಲು ನಿರ್ಧರಿಸಿರುವ ಅಮೆರಿಕಾ ಏಡ್ ಏಜೆನ್ಸಿ ಇನ್ನೂ ಕೊಟ್ಟಿಲ್ಲ.!

ಮಹದೇಶ್ವರಬೆಟ್ಟದ ಜಾತ್ರೆ

ಮೈಸೂರು— ಕೊಳ್ಳೇಗಾಲದ ತಾಲ್ಲೂಕಿನ ಮಹದೇಶ್ವರ ಬೆಟ್ಟದಲ್ಲಿ ತಾ॥ 16 ರಿಂದ 26 ರವರೆಗೆ ನಡೆಯತಕ್ಕ ಜಾತ್ರೆಯನ್ನು ಅಲ್ಲಿನ ನೀರಿನ ಅಧಿಕಾರಿ ಮತ್ತು ಸಾರ್ವಜನಿಕ ಇರೋಗ್ಯ ದೃಷ್ಟಿಯಿಂದ ಲ॥ ಡಿ॥ ಮ್ಯಾಜಿಸ್ಟ್ರೇಟರು ಪ್ರತಿಬಂಧಿಸಿ ಆಜ್ಞೆ ಹೊರಡಿಸಿದ್ದಾರೆ — ಈ ಜಾತ್ರೆ ಕಾಲದಲ್ಲಿ ಅಲ್ಲಿ ಜನ ಸೇರುವುದೂ ನಿಶೇಧಿಸಲ್ಪಟ್ಟಿದೆ ; ಮತ್ತು ಹಾಗೆ ಸೇರಿದವರನ್ನು ಚದುರಿಸಲೂ ಆಜ್ಞೆ ಮಾಡಲಾಗಿದೆ.

ಅಗ್ನಿ ಅನಾಹುತ

ಶ್ರೀನಗರ— ಪಬ್ಲಿಕ್ ಸರ್ವಿಸು ಕಮಿಷನು ಕಚೇರಿಗೆ ಬೆಂಕಿ ಬಿದ್ದು ಸುಟ್ಟಿತು — ಇಲ್ಲಿದ್ದ ಟ್ಯಾಕ್ಸೆಷನ್, ಸೆನ್ಸಸ್ ಸಾಂಪಲು ಸರ್ವೆ ಪಬ್ಲಿಕೇಷನ್ ಇಲಾಖೆಗಳು ತುಂಬಾ ನಷ್ಟಗೊಂಡಿವೆ

ವಿಶ್ವಸಂಸ್ಥೆಗೆ ಗವರ್ನರ್

ವಿಶ್ವಸಂಸ್ಥೆ —ಪಾಕಿಸ್ತಾನದಿಂದ ಭಾರತದ ವಾಯುಮಂಡಲದಲ್ಲಿ ಸತತ ಅತಿಕ್ರಮಣವಾಗುತ್ತಿರುವುದ ವಿಶ್ವಸಂಸ್ಥೆಯ ಗಮನಕ್ಕೆ ತಂದಾಗಿದೆ

ಆಯುಬ್‌ರಿಂದ ಕರೆ

ಕರಾಚಿ— ಭಾರತ ಪಾಕ್ ಕದನ ವಿರಾಮದ ಮುಂಭಾಗಕ್ಕೆ ರಿಧ್ಯಕ್ಷ ಆಯುಬರು ನಿನ್ನೇ ಭೇಟಿಕೊಟ್ಟಿದ್ದರೆಂದು ಹೇಳಲಾಗಿದೆ

—

ರಕ್ಷಣಾ ವಿಧಿಯಂತೆ

ಬೆಂಗಳೂರು— ರಾಜ್ಯದಲ್ಲಿ ರಕ್ಷಣಾ ವಿಧಿ ಮೇರೆ 40 ಮಂದಿ ಬಂಧಿಸಲ್ಪಟ್ಟಿರುವರೆಂದು ಹೇಳಲಾಗಿದೆ

ರಾಷ್ಟ್ರಾಧ್ಯಕ್ಷರು - ಪ್ರಧಾನಿಗಳು

ನವದೆಹಲಿ — ಪ್ರಧಾನಿಗಳು ನಿನ್ನೆ ರಾಷ್ಟ್ರಾಧ್ಯಕ್ಷರನ್ನು ಭೇಟಿಮಾಡಿದಾಗ ಅವರು ಕಶ್ಮೀರ ವಿಚೇರ ಪ್ರವಾಸದಲ್ಲಿ ಅಲ್ಲಿಯ ನಾಯಕರೊಡನೆ ನಡೆಸಿದ ಮಾತುಕತೆಯನ್ನು ಪ್ರಧಾನಿಗಳಿಗೆ ವಿವರಿಸಿದರು.

ಪಾಳು ಕೆಡವಿರುವರು

ಬಾರಮರ್ — ಗಾಡಾ ನಗರವು ಪಾಕಿಸ್ತಾನ ಸೈನಿಕರ ಷೆಲ್ ಹೊಡೆತಕ್ಕೆ ತುತ್ತಾಗಿ ಸ್ಮಶಾನವಾಗಿ ಪರಿವರ್ತಿತವಾಗಿದೆ : ಅಲ್ಲಿನ ಎಲ್ಲಾ ವಾಸಸ್ಥಾನಗಳೂ ಮಸೀದಿಯೂ ನಿರ್ನಾಮವಾಗಿದೆ ; ಕೃಷ್ಣ ಮುಂದಿರುವ ತುಂಬಾ ಡ್ಯಾಮೇಜಾಗಿದೆ ಪಾಳುಬಿದ್ದಿರುವ ಈ ನಗರವನ್ನು ರಾಜಸ್ಥಾನದ ಮುಖ್ಯ ಮಂತ್ರಿ ಮತ್ತು ಪತ್ರಿಕೋದ್ಯೋಗಿಗಳು ತಮ್ಮ ಭೇಟಿವಾಸದಲ್ಲಿ ಕಂಡರು

ಲಕ್ಷಾ ದುಸ್ಥಿತಿ

ಗಯಾ— ಲಕ್ಷಾ ಪಟ್ಟಣವು ಇಂದು ಬೌದ್ಧರ ಪವಿತ್ರಸ್ಥಾನವಾಗಿಲ್ಲ — ಮಾಗಳು ಹೆದರಿ ದೂರ ಹೋಗಿಬಿಟ್ಟಾರೆ — ಚೀಣಿಯರ ವಿಲಿಟರಿ ಕಂಪೋನ್ಮೆಂಟಾಗಿದ್ದು ನಾಗರೀಕರಿಗಿಂತ ಸೋಲ್ಜರುಗಳೇ ಹೆಚ್ಚಾಗಿದ್ದಾರೆ

ವಿದ್ಯಾಕೇಂದ್ರ ನಾಲಂದಾ

– ಶ್ರೀ ಎಂ ಎಸ್ ನರಸಿಂಹಭಟ್, ವಿ.ಜೇಶ್ವರ –

— ಮುಂದುವರಿದುದು —

ಪಾಠಪ್ರವಚನ ಪರೀಕ್ಷೆಯಲ್ಲಿ ಶೇಕಡಾ 20 ಮಾತ್ರ ತೇರ್ಗಡೆ ಹೊಂದುತ್ತಿದ್ದರು; ಕಾಲೇಜಿನಲ್ಲಿ ವಿಜ್ಞಾನ, ತತ್ವ, ವೇದಾಂತ, ಭೂಗೋಳ, ಗಣಿತ ಬೀಜಗಣಿತ, ಎಲ್ಲಾ ವಿಷಯಗಳನ್ನೂ; ಆಯುರ್ವೇದ ಜ್ಯೋತಿಷ್ಯ, ಜ್ಯೋಗೋಳ ಶಾಸ್ತ್ರವನ್ನೂ ಕಲಿಸುತ್ತಿದ್ದರು: ಕುಲಪತಿಯಾದ ಶೀಲಭದ್ರನು ವಿಶ್ವಪಂಡಿತನಾಗಿದ್ದನು; ಇವನ ಮುಂಚಿನವನಾದ ಧರ್ಮಪಾಲನೂ ಹಾಗೆಯೇ ವಿದ್ಯಾವಂತರಲ್ಲಿ ಅಗ್ರಗಣ್ಯನಾಗಿದ್ದನು: ಉಪಾಧ್ಯಾಶ್ರೇಷ್ಠರಲ್ಲಿ ಸ್ಥಿರಮತಿ, ಪ್ರಭಾಮಿತ್ರ, ಜಿನಮಿತ್ರ, ಜಿನಚಂದ್ರ ಇದೂ ಹೆಸರುಗಳೂ ಇವೆ.

ಡಾ || ಜೋಷಿಯವರು ಸ್ವಾತಂತ್ರ್ಯದ ವಿಷಯದಲ್ಲಿ ಈ ರೀತಿ ಬರೆದಿರುವರು:– 'ಇತ್ಸಿಂಗನು ಹೇಳಿರುವಂತೆ– ವಿಶ್ವವಿದ್ಯಾಲಯದ ಕೆಲಸಕಾರ್ಯಗಳು, ವಾರ್ಷಿಕವಾಗಿ ಕೊಡಮಾಡುವ ಕೊಶತಯಿಂದ ಹಿಡಿದು, ಭ್ರಾತೃತ್ವದಂದದ ವೀಲಿನ ಕಿಕ್ಷೀರು ಬಗ್ಗೆ ವಿಚಾರಣೆ ಮತ್ತು ಶಿಕ್ಷೆಯ ಮತ್ತು ಹೊಂದೂಡುವವರೆಗೂ ಪ್ರಜಾಸ್ವಭೌತ್ವ ತತ್ವದಂತೆ ಸಂಪೂರ್ಣ ವಿದ್ಯಾರ್ಥಿಗಳ ತಂಡದಿಂದಲೇ ನಡೆಸಲಾಗುತ್ತಿತ್ತು'

ವಿದ್ಯಾಲಯದಲ್ಲಿ ಬಹಳ ದೊಡ್ಡದಾದ ಪುಸ್ತಕಭಂಡಾರವಿತ್ತು: ಟಿಬೆಟ್ಟಿನಲ್ಲಿ ಸಿಕ್ಕಿದ ಒಬ್ಬು ತಾಳೆಲಿಪಿಯ ಮೇರೆಗೆ ಇದಕ್ಕಾಗಿಯೇ ವಿಶಾಲ ಭವ್ಯವಾದ ಕಟ್ಟಡಗಳಿದ್ದವು. ಅವುಗಳ ಹೆಸರು ರತ್ನಸಾಗರ, ರತ್ನೋದಧಿ ಮತ್ತು ರತ್ನರಂಜಕ; ರತ್ನೋದಧಿ ಕಟ್ಟಡಕ್ಕೆ ಒಂಭತ್ತು ಮಹಡಿಗಳಿದ್ದವು; ಅವುಗಳಲ್ಲಿ ಪವಿತ್ರವಾದ ಮತ್ತು ಜಗತ್ತಿನಲ್ಲೇ ವಿರಳವಾದ ಪುಸ್ತಕಗಳು – ಪ್ರಜ್ಞಾಪಾರಮಿತ ಸೂತ್ರದಂಥಾ – ಇದ್ದುವು

ನಾಲಂದಾದ ವಿದ್ಯಾವಂತರನ್ನು ಹೊರದೇಶದ ರಾಜರು ಆಮಂತ್ರಿಸುತ್ತಿದ್ದರು: ಅಂತೆಯೇ ಹೊರದೇಶದ ರಾಜದೂತರು ಇಲ್ಲಿಗೆ ಒಂದು ವಿದ್ಯಾರ್ಜನೆ ಮಾಡಲಿತ್ತಿದ್ದರು. ದಕ್ಷಿಣದಿಂದ ನಾಗಾರ್ಜುನ, ಆರ್ಯದೇವರೇ ಮೊದಲಾದವರು ಬಂದರು: ಪಶ್ಚಿಮದಿಂದ ರಾಹುಲಭದ್ರ, ಅಸಂಗ, ವಸುಬಂಧು, ದಿಙ್ನಾಗರೂ ಬಂದಿದ್ದರು

ಇಂಥಾ ಶ್ರೇಷ್ಠವಾದ ವಿದ್ಯಾಕೇಂದ್ರವು ಒಂದು ಸಾವಿರ ವರುಷ ಬಾಳಿ ಬದುಕಿ ಇತ್ಸಿಂಗನಂಥಾ ಯಾತ್ರಿಕರಿಂದ ವಿದೇಶದ ಮಹಾಮಂದಿರವೆಂದು ಪರಿಗಣಿಸಲ್ಪಟ್ಟು, 1418 ರಲ್ಲಿ ಭಕ್ತಿಯಾರ್ ಖಿಲ್ಜಿಯ ಕೈಲ್ಲಿ ಬಿದ್ದು ಸರ್ವನಾಶವಾಯಿತು: ಎದೆಯ ಮಹತ್ವಪರಿಯದ ವಸುಸಂಪತ್ತಿನ ಯಾವೊಂದೂ ದೋಷವಿಲ್ಲದ ಜನರನ್ನು ಕೊಂದು ವಿದ್ಯಾಕೇಂದ್ರವನ್ನು ಧ್ವಂಸನಮಾಡಿದರು; ಆದರೆ ಆ ಭವ್ಯ ಅವಶೇಷ ಹೆಸರು ಮಾತ್ರ ಇನ್ನೂ ಇರುವಷ್ಟರಲ್ಲಿ ಇರುವುದು. [ಪ್ರಭಾತ]

Help The Gorakshana

★

ಗೋಸಂರಕ್ಷಣೆಗೆ ಬೆಂಬಲ ನೀಡಿ

ಶ್ರೀ ದ್ವಾರಕಾ ಜಗದ್ಗುರು ಮಹಾಸಂಸ್ಥಾನಿಗಳವರ, ಶ್ರೀ ಶೃಂಗೇರಿ ಜಗದ್ಗುರು ಮಹಾಸಂಸ್ಥಾನಿಗಳವರ ಉದಾರ ಅನುಗ್ರಹ ಕೃಪೆಯಾಗಿದೆ

ಕರ್ನಾಟಕದಲ್ಲಿ ಗೋಸಂರಕ್ಷಣೆ ವಾರ್ತಾಪತ್ರಿಕೆ, ತಾಜಾಆಹಾರ, ಪಶುವೈದ್ಯ ವಿಚಾರಗಳಿಂದ ಕೂಡಿದ ಏಕೈಕ ಪ್ರಚಾರ ಮಾಸಪತ್ರಿಕೆ : ವಾರ್ಷಿಕ ಚಂದ 50 ನೈಸೆ

ಸಹಾಯಕರು ರೂ 10, ಪ್ರೋತ್ಸಾಹಕರು: ರೂ 25 : (ಒಂದು ಸಾರಿಮಾತ್ರ)

ಗೋ ಕೃಷಿಕ್ಕೆ ಲೇಖನಗಳನ್ನೂ ಪ್ರೋತ್ಸಾಹ ಧನವನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ವಿಳಾಸ :– ಗೋಸಂರಕ್ಷಣ ಆಫೀಸು ಚಾಮರಾಜಪುರಂ, ಮೈಸೂರು-4

ವುಡಲ್ಯಾಂಡ್ಸ್ ವೈಭವ 4 ನೇ ವಾರ

ಆವೊ ಪ್ಯಾರ್ ಕರೆ (ಹಿಂದಿ)

Aao Pyar Karen

ಜಾಹುಮುಖರ್ಜಿ — ಸೈರಾ ಬಾನು ರವರ ಕಲಾತ್ಮಕ ನಟನೆ

ಅಕರ್ಷಣೀಯ ಅಭಿನಯದಿಂದ ಕೂಡಿದ ಸಂದೇಶ ಹಿಂದಿ ಚಿತ್ರ

ಪ್ರತಿದಿನ 3 ಪ್ರದರ್ಶನಗಳು

ಅಪೇರ— 15–10–65 ರಿಂದ

ಕಲ್ಯಾಣ ಮಂಟಪಂ (ತಮಿಳು)

ನಟನಟಿಯರು— ಅನಂದನ್, ಆರ್ ವಿಜಯ, ಮನೋಹರ್, ವಸಂತಿ

ತಾಯಿ ನಾಗೇಶ್, ಮನೋರಮ [ದಿನ 3 ಆಟಗಳು]

SHAKTI SUDHA

A Superb Tonic

Quality Printing — Neat Binding

Lakshminarasimha Press

Sivarampet, Mysore

ಆಶೋಕ ವಿಜೆನ್ಸಿನ್

ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಎಲ್ಲ ವಿಧದ ಆಯುರ್ವೇದ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ

ರೋಗಿಗಳಿಗೆ ಸೂಕ್ತ ಔಷಧಿ ಕೊಡಲಾಗುತ್ತದೆ

Protect the Cow

ಗೋಸಂರಕ್ಷಣೆ ಮತ್ತು ಪಾಲನೆಯ ಕಾರ್ಯಗಳು ಹೆಚ್ಚಾಗಲಿ ಸಡೆಯಲಿ

Edited, Printed &Published by Dharmaprachara M S Krishna Rao (Proprietor) at the Satyavadi Press Chamarajapuram, Mysore 4